ದಿನಾಂಕಃ 30-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಜಿಲ್ಲಾ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 28-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

1) ಹೆಸ್ಕಾಂ ನವರು ಕೊಟ್ಟ ಸರ್ವಿಸ ಸರ್ಟಿಫಿಕೇಟ ನಿಪಿ-2

2)ಎಲ್.ಎ.ಸಿ ನಂ.485/2018 ಮತ್ತು ಕನೆಕ್ಟೆಡ್ ಕೇಸುಗಳಲ್ಲಿ ಆದ ತೀರ್ಪಿನ ದೃಢೀಕೃತ ನಕಲು ನಿಪಿ-3

3) ಮಂಗಸೂಳಿ ಗ್ರಾಮದ ಸರ್ವೆ ನಂ.86/7 ರ 1 ಎಕರೆ 3 ಗುಂಟೆಯನ್ನು 3,80,000/- ಗಳಿಗೆ ಮಾರಾಟ ಮಾಡಲು ಒಪ್ಪಿ ದಿನಾಂಕ 29.01.2010 ರಂದು ನೊಂದಾವಣೆ ಆದ ಖರೀದಿ ಕರಾರು ಪತ್ರದ ದೃಢೀಕೃತ ನಕಲು ನಿಪಿ-4

4) ಮಂಗಸೂಳಿ ಗ್ರಾಮದ ಸರ್ವೆ ನಂ.199/8 ರ 1 ಎಕರೆ 20 ಗುಂಟೆಯನ್ನು 4,80,000/- ಗಳಿಗೆ ಮಾರಾಟ ಮಾಡಲು ಒಪ್ಪಿ ದಿನಾಂಕ 26.10.2010 ರಂದು ನೊಂದಾವಣೆ ಆದ ಖರೀದಿ ಕರಾರು ಪತ್ರದ ದೃಢೀಕೃತ ನಕಲು ನಿಪಿ-5

**ಪಾಟೀ ಸವಾಲುಃ**

ಪಾಟೀ ಸವಾಲನ್ನು ಎದುರುದಾರ ಪರ ಮಾನ್ಯ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಜಿಲ್ಲಾ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,

ಬೆಳಗಾವಿ.

ದಿನಾಂಕಃ 12-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ**

5) ಸರ್ವೆ ನಂ.292/1ಅ ರ 1 ಎಕರೆಯನ್ನು 3,00,000/- ರೂ. ಗಳಿಗೆ ಮಾರಾಟ ಮಾಡಲು ಒಪ್ಪಿ ದಿ 06.06.2009 ರಂದು ಮಾಡಿಕೊಂಡ ನೊಂದಾಯಿತ ಖರೀದಿ ಕರಾರು ಪತ್ರ ನಿಪಿ-6

6) ಮಂಗಸೂಳಿ ಗ್ರಾಮದ ಸರ್ವೆ ನಂ.120/5 ರ 1 ಎಕರೆ 19 ಗುಂಟೆಯನ್ನು ರೂ.479000 ಗಳಿಗೆ ಮಾರಾಟ ಮಾಡಲು ಒಪ್ಪಿ ದಿ 19.02.2010 ರಂದು ಮಾಡಿಕೊಂಡ ನೊಂದಾಯಿತ ಖರೀದಿ ಕರಾರು ಪತ್ರ ನಿಪಿ-7

7) ಬೆಳೆ ಇಳುವರಿ ಪ್ರಮಾಣ ಪತ್ರ ನಿಪಿ-8

8) ದರ ಪಟ್ಟಿಯ ದೃಢೀಕೃತ ನಕಲು ನಿಪಿ-9

**ಪಾಟೀ ಸವಾಲುಃ 1ನೇ ಎದುರುದಾರ ಪರ ಮಾನ್ಯ ಡಿಜಿಪಿ ರವರಿಂದಃ**

ನನ್ನ ಆಧಾರ ಕಾರ್ಡ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ತೊಂದರೆ ಇಲ್ಲ.ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳು ಗೊತ್ತು. ನನಗೆ ಸೇರಿದ 36 ಗುಂಟೆಯನ್ನು ಭೂಸ್ವಾ ಧೀನ ಪಡಿಸಿಕೊಳ್ಳಲಾಗಿದೆ. ಮಂಗಸೂಳಿ ಇದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇದೆ ಎಂದರೆ ನಿಜ. ಮಂಗಸೂಳಿಯಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ಪ್ರಕಾರದ ಜಮೀನುಗಳು ಇವೆ ಎಂದರೆ ನಿಜ. ಮಂಗಸೂಳಿಯಲ್ಲಿ ಇದ್ದ ಒಂದೊಂದು ಭಾಗದಲ್ಲಿ ಇದ್ದ ಜಮೀನುಗಳಿಗೆ ಬೇರೆ ಬೇರೆ ಮೌಲ್ಯ ಇದೆ ಎಂದರೆ ನಿಜ. ಮಂಗಸೂಳಿ ಪಟ್ಟಣಕ್ಕೆ ಹೊಂದಿಕೊಂಡ ಇದ್ದ ಜಮೀನುಗಳಿಗೆ ಮತ್ತು ನೀರಾವರಿ ಜಮೀನುಗಳಿಗೆ ಮಾರುಕಟ್ಟೆ ಬೆಲೆ ಹೆಚ್ಚು ಇದೆ ಎಂದರೆ ನಿಜ. ನನ್ನ ಭೂಸ್ವಾದೀನಪಡಿಸಿಕೊಂಡ ಜಮೀನು ಆರ್ ಟಿ ಸಿ ಇದೆ. ಜಮೀನಿನ ಆರ್ ಟಿ ಸಿ ಯಲ್ಲಿ ಮಣ್ಣಿನ ತರಹ, ನೀರಾವರಿ ಮೂಲ

ಜಮೀನಿನಲ್ಲಿ ಬೆಳೆಯುವ ಬೆಳೆಗಳ ಸಂಪೂರ್ಣ ಮಾಹಿತಿ ಇದೆ ಎಂದರೆ ನಿಜ. ನಮ್ಮ ಜಮೀನನ್ನು ಭೂಸ್ವಾದೀನಪಡಿಸಿಕೊಂಡ ಕಾಲಕ್ಕೆ ಇದ್ದ ಸಂಪೂರ್ಣ ಮಾಹಿತಿಯು ಆರ್ ಟಿ ಸಿ ಯಲ್ಲಿ ನಮೂದು ಇತ್ತು ಎಂದರೆ ನಿಜ. ಭೂಸ್ವಾದೀನಪಡಿಸಿಕೊಂಡ ಸಮಯದಲ್ಲಿ ಇದ್ದ ಆರ್ ಟಿ ಸಿ ಯನ್ನು ನನಗೆ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲಾ ಎಂದರೆ ನಿಜ. ನಮ್ಮ ಜಮೀನು ನೀರಾವರಿ ಜಮೀನು ಆಗಿತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಹೆಸ್ಕಾಂ ಸರ್ಟಿಪಿಕೇಟ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ನಿಪಿ 2 ನ್ನು ದಿನಾಂಕ 20.09.2021 ರಲ್ಲಿ ಪಡೆದಿದ್ದು ಎಂದರೆ ನಿಜ. ನಿಪಿ 2 ರಲ್ಲಿ ಭೂಸ್ವಾದೀನವಾದ ಜಮೀನಿನ ಸರ್ವೇ ನಂಬರ ನಮೂದು ಮಾಡಿಲ್ಲ ಎಂದರೆ ನಿಜ. ಭೂಸ್ವಾದೀನಪಡಿಸಿಕೊಂಡ ಜಮೀನು ಹೊರತುಪಡಿಸಿ ನಮಗೆ ಬೇರೆ ಜಮೀನು ಇದೆ ಎಂದರೆ ನಿಜ. ನಮಗೆ ಇದ್ದ ಬೇರೆ ಜಮೀನು ನೀರಾವರಿ ಜಮೀನು ಎಂದರೆ ನಿಜ. ನಮಗೆ ಸೇರಿದ ಬೇರೆ ಜಮೀನಿನ ನಿಪಿ-2 ಖೊಟ್ಟಿ ಸರ್ಟಿಫಿಕೇಟನ್ನು ನಾನು ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಹಾಜರು ಮಾಡಿದೆನು ಎಂದರೆ ಸರಿಯಲ್ಲ.

ಮಂಗಸೂಳಿಯ ಗ್ರಾಮ ನಕಾಶೆ ಸಿಗುತ್ತದೆ ಎಂದರೆ ನಿಜ. ಗ್ರಾಮ ನಕಾಶೆಯಲ್ಲಿ ನಮ್ಮ ಜಮೀನು ಎಲ್ಲಿ ಬರುತ್ತದೆ ಎಂದು ಗೊತ್ತಾಗುತ್ತದೆ ಎಂದರೆ ನಿಜ. ನನಗೆ ಮಂಗಸೂಳಿ ಗ್ರಾಮ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ನಿಜ. ನಿಪಿ-3 ತೀರ್ಪು ನನ್ನ ಜಮೀನಿನದ್ದು ಅಲ್ಲ ಎಂದರೆ ನಿಜ. ನಿಪಿ-8 ಬೆಳೆ ಇಳುವರಿ ಪ್ರಮಾಣ ಪತ್ರ ಅಥಣಿ ತಾಲೂಕಿಗೆ ಸಂಬಂಧಿಸಿದ್ದು ಎಂದರೆ ನಿಜ. ನಿಪಿ-9 ಇದು ಅಥಣಿ ತಾಲೂಕಿನದ್ದು ಆಗಿದ್ದರಿಂದ ನಮ್ಮ ಜಮೀನಿನಲ್ಲಿ ಎಷ್ಟು ಬೆಳೆ ಬೆಳೆಯಲಾಗುತ್ತದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ದರಪಟ್ಟಿ ನಮ್ಮ ಜಮೀನದ್ದು ಅಲ್ಲ ಎಂದರೆ ನಿಜ.

ನನ್ನ ಬ್ಯಾಂಕ ಖಾತೆ ಇದೆ. ನಾವು ಜಮೀನಿನಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕಳುಹಿಸುತ್ತಿದ್ದೆವು. ಸಕ್ಕರೆ ಕಾರ್ಖಾನೆಯ ಬಿಲ್ಲುಗಳು ಬ್ಯಾಂಕ ಖಾತೆಗೆ ಜಮಾ ಆಗುತ್ತವೆ ಎಂದರೆ

ನಿಜ. ಸಕ್ಕರೆ ಕಾರ್ಹಾನೆಯಿಂದ ನನ್ನ ಬ್ಯಾಂಕ ಖಾತೆಗೆ ಹಣ ಜಮಾ ಆದ ಬಗ್ಗೆ ಬ್ಯಾಂಕ ಸ್ಟೇಟಮೆಂಟನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ನಿಜ. ನನ್ನ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದ ಬಗ್ಗೆ ಮತ್ತು ಅದನ್ನು ಸಕ್ಕರೆ ಕಾರ್ಖಾನೆಗೆ ಕಳುಹಿಸುತ್ತಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂ.4 ರಿಂದ 7 ರಲ್ಲಿ ಹೇಳಿದ ಬೆಳೆಗಳನ್ನು ನೀವು ನಿಮ್ಮ ಜಮೀನಿನಲ್ಲಿ ಬೆಳೆಯುತ್ತಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಹಾಜರು ಮಾಡಿಲ್ಲ ಎನ್ನುತ್ತಾರೆ. ನಿಪಿ-8 ಇದು ಅಥಣಿ ತಾಲೂಕಿಗೆ ಸಂಬಂಧಿಸಿದ್ದು ಎಂದರೆ ನಿಜ.

ಮಂಗಸೂಳಿಯಲ್ಲಿ ಸಾಮಾನ್ಯವಾಗಿ ರೈತರಿಗೆ ಸಾಲ ಕೊಡಬೇಕಾದರೆ ಜಮೀನನ್ನು ಅಡ ಇಟ್ಟು ಸಾಲ ಕೊಡುತ್ತಾರೆ ಎಂದರೆ ನಿಜ. ನಾನು ಹಾಜರು ಮಾಡಿದ ನಿಪಿ-4 ರಿಂದ 7 ಖರೀದಿ ಕರಾರು ಪತ್ರಗಳು ರೈತರಿಗೆ ಸಾಲ ಕೊಟ್ಟಾಗ ಬದ್ರತೆಗಾಗಿ ಮಾಡಿಕೊಟ್ಟ ಕರಾರು ಪತ್ರಗಳು ಎಂದರೆ ಸರಿಯಲ್ಲ. ನಿಪಿ-4 ರಿಂದ 7 ರಲ್ಲಿ ಕಾಣಿಸಿದ ಜಮೀನುಗಳು ಖರೀದಿ ಕರಾರು ಪತ್ರದ ಆಧಾರದ ಮೇಲೆ ಕ್ರಯ ಪತ್ರ ಆಗಿದೆಯೋ ಇಲ್ಲವೋ ಎಂದು ನಾನು ಸಬ್ ರೆಜಿಸ್ಟ್ರರ ಕಚೇರಿಗೆ ಹೋಗಿ ಪರಿಶೀಲನೆ ಮಾಡಿಲ್ಲ. ನಿಪಿ-4 ರಿಂದ 7 ಇದು ಹಣಕಾಸಿನ ಬದ್ರತೆಗಾಗಿ ಮಾಡಿಕೊಂಡ ಕರಾರು ಪತ್ರ ಆಗಿದ್ದರಿಂದ ಈ ದಾಖಲೆಗಳ ಆಧಾರದ ಮೇಲೆ ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನಿನ ಬೆಲೆಯನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಿಂದ 7 ರಲ್ಲಿ ಕಾಣಿಸಿದ ಜಮೀನುಗಳು ಮತ್ತು ನನ್ನ ಭೂಸ್ವಾಧೀನಪಡಿಸಿಕೊಂಡ ಜಮೀನು ಒಂದೇ ಪ್ರಕಾರದ ಜಮೀನು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದರೆ ನಿಜ. ನಿಪಿ-3 ರಿಂದ 7 ರಲ್ಲಿ ಕಾಣಿಸಿದ ಜಮೀನುಗಳು ನಮ್ಮ ಜಮೀನಿಗಿಂತ ಫಲವತ್ತಾದ ಮತ್ತು ಹೆಚ್ಚಿನ ಬೆಲೆ ಇರುವ ಜಮೀನುಗಳು ಆಗಿದ್ದರಿಂದ ಆ ದಾಖಲೆಗಳ ಆಧಾರದ ಮೇಲೆ ನನ್ನ ಭೂಸ್ವಾಧೀನಪಡಿಸಿಕೊಂಡ ಜಮೀನಿನ ಬೆಲೆ ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಪ್ರತಿ ಎಕರೆಗೆ 80 ರಿಂದ 100 ಟನ್ ಕಬ್ಬು ಬೆಳೆಯುತ್ತಿದ್ದ ಬಗ್ಗೆ ಮತ್ತು ಪ್ರತಿ ವರ್ಷಕ್ಕೆ

2,80,000/- ನಿವ್ವಳ ಲಾಭ ಪಡೆಯುತ್ತಿದ್ದ ಬಗ್ಗೆ ಮತ್ತು ಕಬ್ಬಿನ ಬೆಳೆಯೊಂದಿಗೆ ಲಗು ಬೆಳೆಗಳನ್ನು ಬೆಳೆದು ಅದರಿಂದ ಪ್ರತಿ ವರ್ಷಕ್ಕೆ ಎಕರೆಗೆ 3,00,000/- ಆದಾಯ ಗಳಿಸುತ್ತಿದ್ದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಪ್ರತಿ ಎಕರೆಗೆ 50 ಲಕ್ಷ ಬೆಲೆ ಬಾಳುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ.

ದಿನಾಂಕ 08.08.2013 ರಂದು ನೊಟೀಫಿಕೇಶನ ಆಯಿತು ಎಂದರೆ ನಿಜ. ನನಗೆ ಭೂಸ್ವಾಧೀನಾಧಿಕಾರಿಗಳು ನೊಟಿಫಿಕೇಷನ್ ಆದ ನಂತರ ನೋಟಿಸ ನೀಡಿದ್ದರು ಎಂದರೆ ಸರಿಯಲ್ಲ. ಅವಾರ್ಡ ಹಣವನ್ನು ಪಡೆಯುವಂತೆ ನಿಮಗೆ ನೋಟಿಸ ನೀಡಿದ್ದರು ಎಂದರೆ ಸಾಕ್ಷಿಯು ಆ ರೀತಿ ನೋಟಿಸ ನೀಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಧಿಸೂಚನೆ ಆದ ನಂತರ ಭೂಸ್ವಾಧೀನಾಧಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ನನ್ನ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಬಂದು ಪರಿಶೀಲನೆ ಮಾಡಿದ್ದಾರೆಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ಸ್ಥಳ ಪರಿಶೀಲನೆ ಕಾಲಕ್ಕೆ ಮಣ್ಣಿನ ತರಹ, ಜಮೀನು ನೀರಾವರಿ ಜಮೀನು ಅಥವಾ ಒಣ ಬೇಸಾಯದ ಜಮೀನು, ಜಮೀನಿನಲ್ಲಿ ಏನು ಬೆಳೆ ಬೆಳೆಯಲಾಗುತ್ತದೆ ಎಂಬುದರ ಬಗ್ಗೆ ಪರಿಶೀಲನೆ ಮಾಡಿ ನಂತರ ಪರಿಹಾರದ ಹಣ ನಿಗಧಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವಾರ್ಡಿನ ಕೋಷ್ಟಕ 2 ರಲ್ಲಿ ಕಾಣಿಸಿದ ಜಮೀನುಗಳು ನನ್ನ ಜಮೀನಿನ ಹತ್ತಿರದ ಜಮೀನುಗಳು ಎಂದರೆ ನಿಜ. ನಮ್ಮ ಜಮೀನು ಮತ್ತು ನಮ್ಮ ಅಕ್ಕಪಕ್ಕದ ಜಮೀನುಗಳು ಒಂದೇ ಬೆಲೆ ಬಾಳುವ ಮತ್ತು ಒಂದೇ ರೀತಿ ಬೆಳೆ ಬೆಳೆಯುವ ಜಮೀನುಗಳು ಎಂದರೆ ನಿಜ. ಅವಾರ್ಡಿನ ಕೋಷ್ಟಕ 2 ರಲ್ಲಿ ನಮೂದಿಸಿದ ಜಮೀನುಗಳಿಗೆ ಸಂಬಂಧಪಟ್ಟಂತೆ 2010 ರಿಂದ 2013 ವರೆಗೆ ಖರೀದಿ ವ್ಯವಹಾರಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಭೂಸ್ವಾಧೀನಾಧಿಕಾರಿಗಳು ಅವಾರ್ಡಿನ ಕೋಷ್ಟಕ ನಂ.2 ರಲ್ಲಿ ಕಾಣಿಸಿದ ಜಮೀನುಗಳ ಮಾರಾಟದ ಅಂಕಿ ಅಂಶಗಳ ಆಧಾರದ ಮೇಲೆ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಮಾರುಕಟ್ಟೆ ಬೆಲೆ ನಿಗದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನು

ಚೆನ್ನಾಗಿದ್ದು ಅದಕ್ಕೆ ಜಾಸ್ತಿ ಬೆಲೆ ಬಾಳುತ್ತದೆ ಎನ್ನುತ್ತಾರೆ. ನಾವು ಭೂಸ್ವಾಧೀನಾಧಿಕಾರಿಗಳಿಂದ ಅವಾರ್ಡ ಹಣ ಪಡೆದಿದ್ದೇವೆ ಎಂದರೆ ನಿಜ. ನಮ್ಮ ಜಮೀನು ಭೂಸ್ವಾಧೀನಪಡಿಸಿಕೊಂಡ ಕಾಲಕ್ಕೆ ಇದ್ದ ಬೆಲೆಗಿಂತಲೂ ಹೆಚ್ಚಿನ ಬೆಲೆಯನ್ನು ನಿಗದಿ ಮಾಡಿ ಪರಿಹಾರದ ಹಣ ಕೊಟ್ಟಿದ್ದರೂ ಸಹ ನಾನು ಇನ್ನೂ ಹೆಚ್ಚಿನ ಪರಿಹಾರದ ಹಣ ಪಡೆಯಲು ಎಂದು ಸುಳ್ಳು ರೆಫರೆನ್ಸ ಅರ್ಜಿ ಸಲ್ಲಿಸಿ ಸುಳ್ಳು ದಾಖಲೆಗಳನ್ನು ಹಾಜರು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2ನೇ ಎದುರುದಾರ ಪರ ಮಾನ್ಯ ಶ್ರೀ ಎಲ್.ಟಿ.ಟಿ. ವಕೀಲರಿಂದಃ</u>**

ಮಧ್ಯಾಹ್ನ ಪಾಟೀ ಸವಾಲು ಮಾಡುವುದಾಗಿ ಹೇಳಿದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಜಿಲ್ಲಾ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ಸಾಕ್ಷಿಯನ್ನು ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರ ಪರ ಮಾನ್ಯ ಶ್ರೀ ಎಲ್.ಟಿ.ಟಿ. ವಕೀಲರಿಂದಃ**

ನನ್ನ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವಾಗ ಭೂಸ್ವಾಧೀನಾಧಿಕಾರಿಗಳು ನನಗೆ ನೋಟೀಸು ನೀಡಿದ್ದರು ಎಂದರೆ ನಿಜ. ಈ ರೀತಿ ನೋಟಿಸು ನೀಡಿದ ನಂತರ ಭೂಸ್ವಾಧೀನಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ನಮ್ಮ ಜಮೀನನ್ನು ಮೋಜನಿ ಮಾಡಿದರು ಎಂದರೆ ನಿಜ. ಭೂಸ್ವಾಧೀನಾಧಿಕಾರಿಗಳು ನಮಗೆ ಕೊಟ್ಟ ಅವಾರ್ಡ ಹಣ ಸರಿಯಾಗಿದೆ ಎಂದರೆ ಸರಿಯಲ್ಲ. ನನ್ನ ಭೂಸ್ವಾಧೀನಪಡಿಸಿಕೊಂಡ ಜಮೀನು ಒಣ ಬೇಸಾಯ ಜಮೀನು ಆಗಿತ್ತು ಎಂದರೆ ಸರಿಯಲ್ಲ. ನೀರಾವರಿ ಜಮೀನು ಆಗಿತ್ತು ಎನ್ನುತ್ತಾರೆ. ನಮ್ಮ ಜಮೀನಿನಲ್ಲಿ ನಾವು ರಾಗಿ, ಜೋಳ, ಸಜ್ಜೆ, ಹುರುಳಿ ಈ ರೀತಿ ಒಣ ಬೇಸಾಯದ ಬೆಳೆ ಬೆಳೆಯುತ್ತಿದ್ದೇವು ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಬೆಳೆದ ಕಬ್ಬನ್ನು ಉಗಾರ ಮತ್ತು ಹಳಿಯಾಳ ಫ್ಯಾಕ್ಟರಿಗೆ ಕಳಿಸುತ್ತಿದ್ದೇವು. ಆ ರೀತಿ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕಳಿಸಿದ ಬಗ್ಗೆ ಕಬ್ಬಿನ ತೂಕದ ಬಿಲ್ಲನ್ನು ಹಾಜರು ಮಾಡಿದ್ದೇನೇ. ನಾನು ಕಬ್ಬಿನ ಬಿಲ್ಲನ್ನಾಗಲೀ, ರಸೀದಿಯನ್ನಾಗಲೀ ಯಾವುದನ್ನೂ ಹಾಜರು ಮಾಡದೇ ಇದ್ದರೂ ಹಾಜರು ಮಾಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಹೆಸ್ಕಾಂ ಸರ್ಟಿಫಿಕೇಟನಲ್ಲಿ ನಮ್ಮ ಜಮೀನಿನ ಸರ್ವೆ ನಂಬರ ನಮೂದು ಇಲ್ಲ ಎಂದರೇ ನಿಜ. ನಿಪಿ-2 ಇದು ಈ ಕೇಸಿಗೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-3 ತೀರ್ಪು ಈ ಕೇಸಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಒಂದು ಊರಿನಲ್ಲಿ ಬೇರೆ ಬೇರೆ ಫಲವತ್ತತೆಯ ಜಮೀನು ಇದೆ ಎಂದರೆ ನಿಜ. ಒಂದು ಜಮೀನಿನಿಂದ ಇನ್ನೊಂದು ಜಮೀನಿನ ಕಿಮ್ಮತ್ತು ಬೇರೆ ಬೇರೆ ಇರುತ್ತದೆ ಎಂದರೆ ನಿಜ. ನಿಪಿ-4 ರಿಂದ 7 ಖರೀದಿ ಕರಾರು ಪತ್ರಗಳು ಈ ಕೇಸಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನು ಮತ್ತು ನಿಪಿ-4 ರಿಂದ 7 ರಲ್ಲಿ ಕಾಣಿಸಿದ ಜಮೀನುಗಳು ಬೇರೆ ಬೇರೆ ಸರ್ವೆ ನಂಬರಗಳು ಎಂದರೆ ನಿಜ. ನಿಪಿ-8 ಮತ್ತು 9ನನ್ನ ಈ ಕೇಸಿಗೆ ಅನ್ವಯವಾಗುವುದಿಲ್ಲ ಎಂದರೆ

ಸರಿಯಲ್ಲ. ನಿಮ್ಮ ಜಮೀನಿನಲ್ಲಿ ಬಾವಿ ಮತ್ತು ಕೊಳವೆ ಬಾವಿ ಇದ್ದ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ ಎಂದರನೆ ಸಾಕ್ಷಿಯು ಹೆಸ್ಕಾಂ ನವರು ಕೊಟ್ಟ ಸರ್ಟಿಫಿಕೇಟ ಹಾಜರು ಮಾಡಿದ್ದೇವೆ ಎನ್ನುತ್ತಾರೆ. ನಾನು ಪಂಪ್ ಸೆಟ್ ನ್ನು ಮತ್ತು ಪೈಪನ್ನು ಖರೀದಿ ಮಾಡಿದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ.ನಮ್ಮ ಬಾವಿ ಮತ್ತು ಕೊಳವೆ ಬಾವಿಯಿಂದ 12 ಎಕರೆಗೆ ನಾವು ನೀರು ಹಾಯಿಸುತ್ತಿದ್ದೇವು. ನಮ್ಮ ಬಾವಿ ಮತ್ತು ಕೊಳವೆ ಬಾವಿಯಿಂದ 12 ಎಕರೆ ಜಮೀನಿಗೆ ನೀರಾವರಿ ಆಗಿತ್ತು ಎಂದು ತೋರಿಸಲು ಯಾವುದೇ ಸಕ್ಷಮ ಅಧಿಕಾರಿಯಿಂದ ಸರ್ಟಿಫಿಕೇಟ ಹಾಜರು ಮಾಡಿಲ್ಲ. ನಮ್ಮ ಜಮೀನಲ್ಲಿ ಶೇಂಗಾ, ಗೋವಿನ ಜೋಳ, ಕಡಲೆ, ಮೆಣಸು, ಉಳ್ಳಾಗಡ್ಡಿ ಇವುಗಳನ್ನು ಬೆಳೆಯಲಾಗಿದೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ಈ ಬೆಳೆಗಳಿಂದ ವರ್ಷಕ್ಕೆ 2,80,000/- ಆದಾಯ ಬರುತ್ತಿತ್ತು ಎಂದು ತೋರಿಸುವ ದಾಖಲೆ ಹಾಜರು ಮಾಡಿಲ್ಲ. ಆ ರೀತಿ ಬೆಳೆಗಳನ್ನು ಬೆಳೆಯುತ್ತಿದ್ದೇವು ಎಂದು ಮತ್ತು 2,80,000/- ಆದಾಯ ಬರುತ್ತಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಕೊಳವೆ ಬಾವಿಯಾಗಲೀ, ಬಾವಿಯಾಗಲೀ ಯಾವುದೂ ಇರಲಿಲ್ಲ ಎಂದರೆ ಸರಿಯಲ್ಲ ಕಬ್ಬು ಮತ್ತು ಮೇವು ಮಾರಾಟದಿಂದ 3 ಲಕ್ಷ ಆದಾಯ ಬರುತ್ತಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ತೀರ್ಪಿನಲ್ಲಿ ಕಾಣಿಸಿದ ಜಮೀನು ಮತ್ತು ನಮ್ಮ ಜಮೀನು ಬೇರೆ ಬೇರೆ ಫಲವತ್ತತೆ ಹೊಂದಿದ ಜಮೀನು ಆಗಿದ್ದರಿಂದ ಬೇರೆ ಬೇರೆ ಕಿಮ್ಮತ್ತು ಆಗುತ್ತದೆ ಎಂದರೆ ಸರಿಯಲ್ಲ. ನಿಪಿ-3 ಈ ಕೇಸಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

ಅವಾರ್ಡ ಹಣ ಪಡೆಯುವಂತೆ ಭೂಸ್ವಾಧೀನಾಧಿಕಾರಿಗಳು ನನಗೆ ನೊಟಿಸು ಕೊಟ್ಟಿದ್ದರು. ಆ ನೊಟೀಸು ಬಂದ ನಂತರ ನಾನು ಅವಾರ್ಡ ಹಣ ಪಡೆದೆನು ಎಂದರೆ ನಿಜ. ಅವಾರ್ಡ ಹಣ ಪಡೆದ ನಂತರ ಹೆಚ್ಚಿನ ಪರಿಹಾರದ ಹಣ ಬೇಕು ಎಂದು ರೆಫರೆನ್ಸ ಅರ್ಜಿಯನ್ನು ಎಷ್ಟು ಸಮಯದಲ್ಲಿ ಹಾಕಲಾಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ರೆಫರೆನ್ಸ ಅರ್ಜಿಯನ್ನು ನಾನು ನಿಗದಿತ ಅವಧಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ 50 ಲಕ್ಷ

ಕಿಮ್ಮತ್ತು ಆಗುತ್ತಿತ್ತು ಎಂದು ತೋರಿಸಲು ಕ್ರಯಪತ್ರ ಹಾಜರು ಮಾಡಿಲ್ಲ. ಭೂಸ್ವಾಧೀನಾಧಿಕಾರಿಳು ಮಾಡಿದ ಅವಾರ್ಡ ಮತ್ತು ನೀಡಿದ ಅವಾರ್ಡ ಹಣ ಸರಿಯಾಗಿದ್ದರೂ ಸಹ ಹೆಚ್ಚಿನ ಪರಿಹಾರದ ಹಣ ಪಡೆಯಲು ಎಂದು ಜಮೀನಿನ ಕಿಮ್ಮತ್ತು 50 ಲಕ್ಷ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ರೆಫರೆನ್ಸ ಅರ್ಜಿ ಸಲ್ಲಿಸಿ ಸುಳ್ಳು ದಾಖಲೆಗಳನ್ನು ಹಾಜರು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಜಿಲ್ಲಾ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.